ಧ್ಯಕ್ಷ ವಿ. ರಾಮಮೂರ್ತಿ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

# ಅರ್ಹತಾ ಪತ್ರ ವಿತರಣೆ

ರಾಮನಗರ, ಜು. 16 - ತಾಲೂಕಿನ ಬಿಡದಿಯ ಟೆಲ್‌ನೆಕ್ ಸಂಸ್ಥೆಯಲ್ಲಿ ಏರ್ಪಡಿಸಿದ್ದ ಅರ್ಹತಾ ಪತ್ರ ವಿತರಣೆ ಸಮಾರಂಭವನ್ನು ಶಾಸಕ ಎಚ್.ಡಿ. ಕುಮಾರಸ್ವಾಮಿ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಬಿಡದಿ ಸುತ್ತಮುತ್ತಲಿನ ಹಳ್ಳಿಗಳ ಆರ್ಥಿಕ, ಸಾಮಾಜಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸಂಸ್ಥೆ ಅರ್ಹ ಅಭ್ಯರ್ಥಿಗಳಿಗೆ ಉಚಿತವಾಗಿ ಕಂಪ್ಯೂಟರ್ ಶಿಕ್ಷಣವನ್ನು ನೀಡುತ್ತಿರುವುದು ಪ್ರಶಂಸನೀಯ ಎಂದರು.

ಟೆಲ್‌ನೆಕ್ ಕೇಂದ್ರ ಕಳೆದ 3 ವರ್ಷಗಳ ಹಿಂದೆ ಸ್ಥಾಪನೆಗೊಂಡಿದೆ. ಈ ಸಂಸ್ಥೆ ಸ್ಪೈನ್ ದೇಶದ ಭಾಸ್ಕ್ ಸರಕಾರದ ಧನ ಸಹಾಯ ಪಡೆಯುತ್ತಿರುವ ಎನ್ ಚಾರ್ಜ್ ಎಂಬ ಸ್ವಯಂ ಸಂಸ್ಥೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಆದರೆ ಕಳೆದ ಒಂದು ವರ್ಷದಿಂದ ಭಾಸ್ಕ್ ಸರಕಾರದ ಧನ ಸಹಾಯ ರದ್ದಾಗಿದೆ. ಗ್ರಾಮೀಣ ಮಹಿಳೆಯರಿಗೆ ಟೈಲರಿಂಗ್, ಸೌಂದರ್ಯವರ್ಧಕ ತರಬೇತಿ ಮತ್ತು ಸ್ಕ್ರೀನ್ ಪ್ರಿಂಟಿಂಗ್ ಹಾಗೂ ವಾಹನ ಚಾಲನೆ ತರಬೇತಿ ನೀಡುವ ಉದ್ದೇಶವನ್ನು ಕೇಂದ್ರ ಹೊಂದಿದ್ದು, ಶಾಸಕರು ಕೇಂದ್ರಕ್ಕೆ ಸರಕಾರದ ಸೌಲಭ್ಯಗಳನ್ನು ದೊರಕಿಸಿಕೊಡಬೇಕು ಎಂದು ಕೇಂದ್ರದ ಮುಖ್ಯಸ್ಥ ಎಸ್. ಕಾರ್ತಿಕ್ ಕುಮಾರ್ ಮನವಿ ಮಾಡಿದರು.

15 ಮಂದಿ ವಿದ್ಯಾರ್ಥಿಗಳಿಗೆ ಶಾಸಕರು ಅರ್ಹತಾ ಪತ್ರ ವಿತರಿಸಿದರು. ಬ್ಯಾಟಪ್ಪ, ಜಾ.ದಳ ಮುಖಂಡರಾದ ನಾಗರಾಜ್, ರವಿ, ಸೋಮೇಗೌಡ, ರಮೇಶ್, ಚಂದ್ರ ಹಾಗೂ ನರಸಿಂಹೇಗೌಡ ಹಾಜರಿದ್ದರು.



ರಾಮನಗರ ತಾಲೂಕಿನ ಬಿಡದಿಯಲ್ಲಿರುವ ಟೆಲ್‌ನೆಕ್ ಕೇಂದ್ರದಲ್ಲಿ ಏರ್ಪಡಿಸಿದ್ದ ವಿದ್ಯಾರ್ಥಿಗಳಿಗೆ ಅರ್ಹತಾ ಪತ್ರ ವಿತರಣೆ ಸಮಾರಂಭವನ್ನು ಶಾಸಕ ಎಚ್.ಡಿ. ಕುಮಾರಸ್ವಾಮಿ ಉದ್ಘಾಟಿಸಿದರು.